

# ಸಭೆಗಳಿಗೆ
## ದೇವರು ನುಡಿದ ಮಾತು



ದೇವರು ಸಭೆಗಳ ಕುರಿತು ಪ್ರಕಟಿಸಿ ತಿಳಿಸಿದಂತ ಸಂಗತಿಗಳು ಈ ಕರ ಪತ್ರದಲ್ಲಿ ಇರುವಂತದ್ದಾಗಿದೆ. ಈಗ ಸಭೆಗಳನ್ನು ಗುರಿಯಿಟ್ಟು ಹೊರಟಿರುವ ಉಪದ್ರವಗಳು ಎದ್ದಿರಲು, ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಾಗಿ ಬಹುತೀವ್ರವಾಗಿ ಹರಡುತ್ತದೆಂಬುದನ್ನು ದೇವರು ಪ್ರಕಟಿಸಿ ತೋರಿಸುವದರೊಂದಿಗೆ, ಇದಕ್ಕಾಗಿ ನಾವು ಮಾಡಬೇಕಾದದ್ದೇನು ಎಂಬುದನ್ನು ಪ್ರಕಟಿಸಿ ತೋರಿದ್ದಾನೆ. ಅತ್ಯಾಸಕ್ತಿಯಿಂದ ನಾವು ಕಾರ್ಯನಿರ್ವಹಿಸಬೇಕೆಂದು ನಿಮ್ಮ ಭಾರವುಳ್ಳ ಪ್ರಾರ್ಥನೆಗಾಗಿ ಈ ಕರಪತ್ರವು ಪ್ರಕಟಿಸಲ್ಪಟ್ಟಿದೆ. ಪೌಳಿಯ ಒಡಕಿನಲ್ಲಿ ನಿಂತು ಪ್ರಾರ್ಥಿಸಿರಿ. ಜಯವು ಕಂಡಿತ.

ಈ ಪ್ರವಾದನ ನುಡಿಯು 02.09.2019ರಲ್ಲಿ ದೇವರು ಸಹೋ. ವಿನ್ಸೆಂಟ್ ಸೆಲ್ವಕುಮಾರ್ ರವರಿಗೆ ಪ್ರಕಟಿಸಿ ತಿಳಿಸಿದಂತದ್ದು.

# ಸಭೆಗಳಿಗೆ ದೇವರು ನುಡಿದ ಮಾತು

ಸಹೋ. ವಿನ್ಸೆಂಟ್ ಸೆಲ್ವಕುಮಾರ್

2019 ನೇ ವರ್ಷದ ಒಂಭತ್ತನೇ ತಿಂಗಳಿನ ಎರಡನೇ ದಿನದಲ್ಲಿ ಚೆನ್ನೈನ್ನಲ್ಲಿ ದೇವರ ಮಕ್ಕಳೊಂದಿಗೆ ನಾನು ಪ್ರಾರ್ಥಿಸುತ್ತಿರುವ ಸಂದರ್ಭದಲ್ಲಿ, ದೇವರು ಸಭೆಗಳ ಬಗ್ಗೆಯೂ, ತನ್ನ ಸೇವಕರ ಬಗ್ಗೆಯೂ ಮಾತಾಡಿ: ಇಗೋ, ನಿನ್ನ ದೇಶದಲ್ಲಿ ಒಂದು ದುಷ್ಟಕಾಲ ಸಭೆಗಳ ಮೇಲೂ, ನನ್ನ ನಾಮವನ್ನು ಧರಿಸಿರುವ ನನ್ನ ಜನರ ಮೇಲೂ ಬಿರುಸಿನಿಂದ ಬರುತ್ತಿದೆ. ಆ ದಿನಗಳಲ್ಲಿ ಅನೇಕರು ಕಾರ್ಯಮಾಡಲು ಸಾಧ್ಯವಾಗದಂತೆ ಕೈಗಳು ಕಟ್ಟಲ್ಪಡುವಂತದ್ದನ್ನೂ,ಬಹುಜನರ ಆಸ್ತಿಗಳು, ಕೂಡಿಸಿಟ್ಟಂತ ಸಂಪತ್ತುಗಳು ವಶಪಡಿಸಿಕೊಳ್ಳುವಂತದ್ದನ್ನೂ,ಅನೇಕರ ಅಪರಾಧಗಳನ್ನು ವಿಧಿಸುವಂತದ್ದನ್ನೂ, ಕೆಲವು ಸಭೆಗಳು ಚದರಿಸಲ್ಪಡುವಂತದ್ದನ್ನೂ, ಅನೇಕ ಸ್ಥಳಗಳಲ್ಲಿ ಮಂದೆಗಳು ಹಿಂಜರಿಯುವಂತದ್ದನ್ನೂ ನೋಡುವಿರಿ.

ಸಭೆಗಳಲ್ಲಿ ಕೆಲವು ಕೆಡವಲ್ಪಡುವಂತಹ, ಸಭೆಯ ಸೇವೆಗೆ ಕೈಜೋಡಿಸಿದರೂ, ಸಭೆಯಲ್ಲಿ ಮುಖ್ಯ ಪೀಠಗಳಲ್ಲಿ ಕುಳಿತಿದ್ದವರುಗಳಲ್ಲಿ ಕೆಲವರು ಬೇರ್ಪಟ್ಟು ಹೋಗುವಂತಹ, ಕೆಲವು ಸಭೆಗಳು ಒಡೆದು ಹಾಕಲ್ಪಡುವಂತಹ, ಕೆಲವು ಸಭೆಗಳ ಅಸ್ಥಿವಾರಗಳು ಕದಲಿಸಲ್ಪಡುವಂತಹ ಕಾಲವು ಬರುತ್ತಿದೆ. ಕೇಡು ಬರುತ್ತಿದೆ. ಅದು ನಿನ್ನ ದೇಶ ನನ್ನ ಜನರ ಮೇಲೆ ಎರಗುತ್ತದೆ. ಇದಕ್ಕಾಗಿ ನೀನು ಮುಂಚಿತವಾಗಿ ಮಾಡಬೇಕಾದದ್ದು: ಸಭೆಯ ಅಸ್ಥಿವಾರವನ್ನು ಭದ್ರಪಡಿಸಿ, ಅದರ ಗೋಡೆಗಳನ್ನು ಕಾಯ್ದುಕೋ, ನಿನ್ನ ಜನರನ್ನು ನನ್ನ ಸತ್ಯದ ಬಲದಿಂದ ನೆಲೆಗೊಳಿಸಿ ನಿನ್ನ ಮಂದೆಯನ್ನು ಕಾಯ್ದುಕೋ. ಕೇಡು ಬಲಗೊಳ್ಳುವ ಮುನ್ನ, ಕೇಡು ಸಮಯಹೊಂದಿ ಹೊರಡುವ ಮುನ್ನ, ಕೆಡುಕರ ಕಾಲುಗಳು ನಿಮ್ಮ ಬಳಿ ಹಾದುಬರುವ ಮುನ್ನ ನೀವು ಎದ್ದು, ಬೆಳಕನ್ನು ನಿಮ್ಮ ಬಳಿ ಹರಡಮಾಡಿರಿ.

ಬೆಳಕೆಂಬುದು ಏನೆಂದು ನಿಮ್ಮ ಜನರಿಗೆ ಹೇಳಿಕೊಡಿರಿ. ಆ ಬೆಳಕಿನಿಂದ ನಿಮ್ಮನ್ನು ಮರೆಮಾಡಿಕೊಂಡು ನಿಮ್ಮ ಸುತ್ತಲು ಇಳಿಯುವ ಅಂಧಕಾರವನ್ನು ಹಟ್ಟಿದರೆ, ನೀವು ಅಂಧಕಾರಕ್ಕೆ ಸೋಲದೆ ಬೆಳಕಿನಿಂದ ಅಂಧಕಾರವನ್ನು ಜೈಯಿಸಿರುವಿರಿ. ಆಗ ನಾನು ಅಂಧಕಾರದಿಂದ ಅಧಿಕಾರವನ್ನು ಹೊಂದಿರುವವರ ನಡುವೆ ಒಬ್ಬರ ಖಡ್ಗವನ್ನು ಒಬ್ಬರಿಗೆ ವಿರುದ್ಧವಾಗಿ ತಿರುಗಿಸಿ, ನಿನ್ನನ್ನು ಗುರಿಮಾಡಿ ಬಂದವರನ್ನು ದೆಸೆಗೆಡಿಸಿ ಮಾರ್ಗಬದಲಿಸುವಂತೆ ಮಾಡುವೆ. ಇವರ ಮೂಗಿನಲ್ಲಿ, ಮೂಗುದಾರ ಹಾಕಿ ಅವರನ್ನು ನಾನು ತಿರುಗಿಸುವೆನು. ನಿಮ್ಮ ಮಧ್ಯದಲ್ಲಿ ಕೇಡನ್ನು ಮಾಡಲು ನೆನೆಸಿದವರು, ಅದಕ್ಕಿಂದ ದೊಡ್ಡ ಕೇಡು ತಮ್ಮ ಮೇಲೆ ಬರುವಂತದ್ದನ್ನು ನೋಡಿ ನಿಮ್ಮನ್ನು ಬಿಟ್ಟು ಬೇರೆ ಮಾರ್ಗ ಹಿಡಿಯುವರು. ಆದರೂ, ನಾನು ಹೇಳಿರುವಂತದ್ದನ್ನು ನೀವು ನೆರವೇರಿಸದ ಹೊರತು ಇದು ಸಾಗದು.

ಇದು ನಿಮ್ಮ ಕೈಯಲಿದೆ. ಕೇಡೂ, ಆಶೀರ್ವಾದವು ನಿಮ್ಮ ಮುಂದೆ ಇಡಲ್ಪಟ್ಟಿದೆ. ಬೆಳಕನ್ನು ನಿಮ್ಮ ಕೈಗಳಲ್ಲಿ ಎತ್ತಿಕೊಳ್ಳಿರಿ. ನಿಮ್ಮಲ್ಲಿರುವ ಗಾಯಗೊಂಡ ಕಾರ್ಯಗಳ ಕೀವಿನ ಮೊಳಕೆಯನ್ನು ಚಿವುಕಿ ಬಾಸುಂಡೆಗೆ ಮದ್ದಚ್ಚಿರಿ. ನಿಮ್ಮ ಮಂದೆಯನ್ನು ಬಲಪಡಿಸಿಕೊಳ್ಳಿರಿ. ಅದರ ಮಧ್ಯ ಬೆಳಕನ್ನು ಬಿತ್ತಿರಿ. ಆಗ ನಿಮ್ಮ ದೀಪವು ಆರದೆಯೂ, ನಿಮ್ಮ ಬೆಳಕು ಕುಂದದೆಯೂ ಅಂಧಕಾರವು ನಿಮ್ಮನ್ನು ಹಿಡಿದುಕೊಳ್ಳದೆಯೂ ಇರುತ್ತದೆ.

ಲೋಕದಲ್ಲಿ ಹುಟ್ಟಿದ ಯಾವ ಮನುಷ್ಯನನ್ನು ಉರಿಯುವ ಬೆಳಕಿನೋಪಾದಿಯಲ್ಲಿ ಮಾಡುವಂತ ನಿಜವಾದ ಬೆಳಕನ್ನು ಜನರ ಹೃದಯದಲ್ಲಿ ಆಳವಾಗಿ ಬಿತ್ತಿರಿ. ಆಗ ನಿಮ್ಮ ದೇಶದಲ್ಲಿ ಇಗೋ, ಕಂಕಣ ಕಟ್ಟಿಕೊಂಡು ಬಂದಂತ ಸೌಲನಂತವರು ಪೌಲನಂತರಾಗುವದನ್ನೂ, ನಿಮಗೆ ವಿರೋಧವಾಗಿ ಎದ್ದು ಬರುವ ಕೆಡುಕರು ತಮ್ಮ ಮಾರ್ಗ ಬದಲಾಗಿ ಹಿಂತಿರುಗಿ ಹೋಗುವಂತದ್ದನ್ನು ನೋಡುವಿರಿ ಎಂದು ದೇವರು ಹೇಳುತ್ತಾನೆ.

ನಂತರ ದೇವರು ಮಾತನಾಡಿ: ನಿಮಗೆ ಕೇಡು ಮಾಡಬೇಕೆಂದು ಅವರು ಉಂಟುಮಾಡಿಕೊಂಡಿರುವ ಯೋಚನೆಗಿಂತಲೂ, ಅವರ ಮೇಲೆ ಬರುವಂತ ಕೇಡು ಬಹು ದೊಡ್ಡದೆಂದು ಕಂಡು ಹೆದರಿ ಅವರು ತಮ್ಮ ಮಾರ್ಗಗಳನ್ನು ಬಿಟ್ಟು ಓಡಿಹೋಗುವರು. ನಿಮ್ಮ ಬಗ್ಗೆ ಅವರು ಇಟ್ಟುಕೊಂಡಿರುವ ಕೇಡಿನ ತಂತ್ರಗಳನ್ನು ಅವರು ನಿಮ್ಮ ಮೇಲೆ ನೆರವೇರಿಸದಂತೆ ನಾನು ಅವರ ಕಾಲುಗಳನ್ನು ತಿರುಗಿಸುವೆನು. ಕೈಗಳನ್ನು ಬಲಹೀನಗೊಳಿಸುವೆನು.

ಸಭೆಯೆ ಎದ್ದೇಳು: ನಾನು ನಿಮಗೆ ನೀಡಿದ ಈ ಮಾತುಗಳನ್ನು ಅತಿಬೇಗನೆ ಸಭೆಗಳೊಳಗೆ ತೆಗೆದುಕೊಂಡುಹೋಗಿ ನನ್ನ ಜನರ ಕಿವಿಗಳು ಕೇಳುವಂತೆ ಇದನ್ನು ನುಡಿಯಿರಿ. ಇದನ್ನು ಕೇಳಿಸಿಕೊಳ್ಳುವ ಪ್ರತಿಯೊಬ್ಬನು ಜಿತೇಂದ್ರಿಯನಾಗಿ ನನಗೆಂದು ಜವಾಬ್ದಾರಿವಹಿಸಿ ಎದ್ದರೆ ನಿನ್ನ ದೇಶದ ನಡುವೆ ನಿಮ್ಮ ಎಲ್ಲೆಗಳು ನಾಶವಾಗದೆ ರಕ್ಷಿಸಲ್ಪಟ್ಟಿರುತ್ತದೆ. ನೀವು ಇದರ ಬಗ್ಗೆ ಇನ್ನೂ ಮನಸ್ಸುಮಾಡದೆ ಉದಾಸೀನರಾಗಿರುವವರೆಯಾದರೆ ನಾನು ಮೇಲೆ ನಿಮಗೆ ಹೇಳಿದಂತ ಕೇಡುಗಳೆಲ್ಲವೂ ಪಕ್ಕನೆ ಬಂದು ನಿಮ್ಮ ಮೇಲೆ ನೆರವೇರುವಂತದ್ದನ್ನು ನೋಡುವಿರಿ. ಆಗ ನನ್ನ ಸೇವಕರು ಮಾಡಿದ ಕಾರ್ಯಗಳಲ್ಲಿ ಅನೇಕವಾದವುಗಳು ಮಣ್ಣಲ್ಲಿ ಮಣ್ಣಾಗಿ, ಅನೇಕ ಸಭೆಗಳು ಹಾಳಾಗಿಹೋಗಿ, ಅದರಲ್ಲಿನ ಬಹುಸಭೆಗಳು ಅನ್ಯರ ಕೈವಶವಾಗಿ, ಅನೇಕರು ತಮ್ಮ ಜೀವನಾಧಾರವನ್ನು ಕಳಕೊಂಡು, ಕೆಲವರ ಸೇವೆಗಳು ಮಣ್ಣುಮುಚ್ಚಿಹೋಗುವದನ್ನು ನೋಡಿರಿ. ಮತ್ತೂ, ಮಂದೆಯಲ್ಲಿರುವವರುಗಳಲ್ಲಿ ಅನೇಕರು ತಮ್ಮ ಸುತ್ತಲೂ ಉಪದ್ರವಗಳನ್ನು ನೋಡುವದರಿಂದ ದೆಸೆಗೆಟ್ಟು ತಾವು ಬಿಟ್ಟು ಬಂದ ಹಳೆಜೀವಿತಕ್ಕೆ ಹಿಂತಿರುಗುವರು. ಇವರುಗಳಲ್ಲಿ ಅನೇಕರು ಹೆದರಿಸುವಿಕೆಗಳನ್ನು ಕಂಡು ಹೆದರಿ ಹಿಂಜರಿದು ಹಿಡುಕೊಡುವರು.

ವಂಚನೆಗೂ, ಕೆಡುಕಿಗೂ, ಕೇಡಿನ ಕೃತ್ಯಗಳಿಗೂ, ರಂಜನೆಯ ಕ್ರಿಯೆಗಳಿಗೂ ಇಗೋ, ಕಾಮವಿಲಾಸಗಳಿಗೂ, ಅಶುದ್ಧಗಳಿಗೂ, ಶರೀರದ ಇಚ್ಚೆಗಳಿಗೂ ನನ್ನ ಸಭೆಗಳೊಳಗೆ ಸ್ಥಳನೀಡಿ, ನನ್ನ ಜನರನ್ನು ಅಶುದ್ಧಗೊಳಿಸಿ ಮೋವಾಬ್ಯರ ಅನಾಚಾರಗಳನ್ನು ನಡೆಸಿ ಅವರನ್ನು ಬಲವಂತಗೊಳಿಸಿ, ಅವರನ್ನು ತಂತ್ರದಿಂದ ವಶಮಾಡಿ ವಂಚಿಸಿದವರು ಮಾನಸಾಂತಗೊಳ್ಳಲ್ಲಿ.

ಸಭೆಯೇ.. ನಿನ್ನ ಆದಿನೆಲೆಗೆ ತಿರುಗು. ನನ್ನ ಬಳಿ ನಿನಗೆ ಸಹಾಯವಿದೆ ಎಂದು ಮತ್ತೆ ನಿನಗೆ ಹೇಳುತ್ತೇನೆ. ಇಲ್ಲದಿದ್ದರೆ, ಎಲ್ಲವನ್ನು ಕಳಕೊಳ್ಳುವಂತೆ ನನ್ನ ರೋಷಾಗ್ನಿ ಪಾತ್ರೆ ನಿನ್ನ ಬಿಟ್ಟು ಅಗಲುವದಿಲ್ಲ.

## ಪ್ರಾರ್ಥನ ಮನವಿ

01. ಸಭೆಯೆಂಬುದು ಇಂದಿಗೆ ಒಂದು ಮಹಾಉಪದ್ರವದ ಕಾಲದ ಕಡೆಗೆ ಜರುಗುತ್ತಿದೆ. ದೇವರ ಮಕ್ಕಳಿಗೆ ವಿರುದ್ಧವಾಗಿ ಕಾನೂನುಗಳು ರಚಿಸಲ್ಪಟ್ಟು ಕಠಿಣವಾದ ಉಪದ್ರವಗಳು ಹೆಚ್ಚುತ್ತದೆ ಎಂದು ದೇವರು ಕೆಲವು ವರ್ಷಗಳಿಂದಲೇ ಎಚ್ಚರಿಸುತ್ತಾ ಬರುತ್ತಿದ್ದಾನೆ. ಇಗೋ, ನಮ್ಮ ಕಣ್ಣುಗಳೇ ಕಾಣುವಂತೆ ಸಮೀಪವಾಗಿ ನಡೆಯುತ್ತಾ ಬರುತ್ತಿದೆ. ಈ ಕೇಡಿನ ಉಪದ್ರವ ಕಾಲಗಳು ಸಭೆಗಳನ್ನು ನಾಶಪಡಿಸದಂತೆ ಸಭೆಗಳ ರಕ್ಷಣೆಗಾಗಿ ಪ್ರಾರ್ಥಿಸಿರಿ.

02. ಅನೇಕ ಸ್ಥಳಗಳಲ್ಲಿ ಸಭೆಗಳು ನಾಶವಾಗುವದನ್ನೂ, ಸಭೆಗಳ ಆಸ್ಥಿಗಳು, ಸಭೆಗಳ ಹಿರಿಯರು, ಮಿಷನರಿಗಳು ದೇವರ ಸೇವೆಗಾಗಿ ಕೂಡಿಸಿಟ್ಟ ಭೂಮಿಗಳು, ಕಟ್ಟಡಗಳು ಅಪಹರಿಸಲ್ಪಡದಂತೆ ಅವುಗಳನ್ನು ದೇವರು ರಕ್ಷಿಸುವಂತೆಯೂ ಪ್ರಾರ್ಥಿಸಿರಿ.

03. ಅಂಧಕಾರದ ಕಾಲವು ಬರುವ ಸಂದರ್ಭಗಳಲ್ಲಿ ಬೆಳಕು ಪ್ರಕಾಶಿಸುವಂತೆಯೂ, ಬೆಳಕಿನಿಂದ ಮಾತ್ರವೇ ಅಂಧಕಾರವನ್ನು ಗೆಲ್ಲಲು ಸಾಧ್ಯವೆಂದು ದೇವರು ಪ್ರಕಟಿಸಿದ್ದಾನೆ. ಸಭೆಯೆಂಬುದು ಅಂಧಕಾರ ಕೃತ್ಯಗಳನ್ನು ತನ್ನ ಬಳಿಯಿಂದ ಅಗಲಿಸುವಂತೆಯೂ, ಬೆಳಕಿನ ಕೃತ್ಯಗಳನ್ನು ತನ್ನ ಬಳಿ ಹೆಚ್ಚಿಸಿಕೊಳ್ಳುವಂತೆಯೂ ಮಾನಸಾಂತರ ಹೊಂದುವಂತೆ ಪ್ರಾರ್ಥಿಸಿರಿ.

04. ಪರಿಶುದ್ಧತ್ವವು, ಸತ್ಯತೆಯೇ, ಸಭೆಯೆನ್ನು ಪ್ರಕಾಶಿಸುವಂತೆ ಮಾಡುವ ಬೆಳಕು ಎಂದು ದೇವರು ನುಡಿದಿದ್ದಾನೆ. ಅಯುಕ್ತವಾದ ಕಟ್ಟಕಥೆಗಳು ಮತ್ತು ಸುಳ್ಳುಭೋಧನೆಗಳನ್ನು ಸಭೆಯೆಂಬುದು ಬಿಟ್ಟು ಅಗಲಿ ಮಾನಸಾಂತರ ಹೊಂದಿ ಪರಿಶುದ್ಧತ್ವವನ್ನು ತನ್ನ ಬಳಿ ಹೆಚ್ಚಿಸಿಕೊಳ್ಳುವಂತೆಯೂ, ಸತ್ಯತೆಯಲ್ಲಿ ಇನ್ನೂ ಬಲಹೊಂದುವಂತೆಯೂ, ಸಭೆಗಳಿಗಾಗಿ ಪ್ರಾರ್ಥಿಸಿರಿ.

05. ಇತ್ತೀಚೆಗೆ ಸಭೆಗಳಲ್ಲೂ, ದೇವ ಜನರ ನಡುವೆಯೂ ಹೆಚ್ಚಿಕೊಂಡಿರುವ ಮನರಂಜನೆಯ ಆರಾಧನೆಗಳು, ಮೋವಾಬ್ಯರ ಅಶುದ್ಧವಾದ ಶಾರೀರಿಕ ಕೃತ್ಯಗಳಂತವುಗಳು ನಿಜವಾದ ದೇವಮಕ್ಕಳನ್ನು ಬೇಸರಗೊಳಿಸುತ್ತದೆ. ಇಂತಹ ಶಾರೀರಿಕ ಕೃತ್ಯಗಳನ್ನು ಸಭೆಗಳ ನಡುವೆ ಉಂಟುಮಾಡಿದ್ದೇ ಸಭೆಗಳ ಹಿಂಜರಿಕೆಗೆ ಕಾರಣವೆಂದು ದೇವರು ಪ್ರಕಟಿಸಿದ್ದಾನೆ. ಇಂತಹ ಕೃತ್ಯಗಳು ಸಭೆಗಳನ್ನು ಬಿಟ್ಟು ತೊಲಗಿ ಹೋಗುವಂತೆಯೂ, ಜನರು ಜಿತೇಂದ್ರಿಯರಾಗಿ ಇಂತಹ ಸೇವಕರನ್ನು ಸೇವೆಗಳನ್ನು ಬಿಟ್ಟು ಅಗಲುವಂತೆಯೂ ಪ್ರಾರ್ಥಿಸಿಕೊಳ್ಳಿರಿ.

06. ಸಭೆಯಲ್ಲಿ ಬೆಳಕನ್ನು ಏರ್ಪಡಿಸುವದಕ್ಕೂ, ಬೆಳಿಕಿನಿಂದ ಕತ್ತಲನ್ನು ಗೆಲ್ಲುವಂತಹ ರಹಸ್ಯಗಳು ತಿಳಿದುಕೊಳ್ಳುವದಕ್ಕೂ ಪ್ರಾರ್ಥಿಸಿರಿ. ಲೋಕದಲ್ಲಿ ಹುಟ್ಟಿಬಂದ ಯಾವ ಮನುಷ್ಯನನ್ನು ಬೆಳಕಿನೋಪಾದಿಯಲ್ಲಿ ಉರಿಯುವಂತೆಯೂ ಮಾಡುವ ನಿಜವಾದ ಬೆಳಕಾದ ಕ್ರಿಸ್ತನು ಜನರ ನಡುವೆ ಬಹು ಆಳವಾಗಿ ಉಪದೇಶಿಸಲ್ಪಡು– ವಡುವಂತೆಯೂ, ಇದಕ್ಕಾಗಿ ಕಾರ್ಯಮಾಡುವ ನಂಬಿಕೆಯಲ್ಲಿ ಬಲವುಳ್ಳ ಸೇವಕರು ಎದ್ದೇಳುವಂತೆ ಪ್ರಾರ್ಥಿಸಿರಿ.

07. ನಾವು ತ್ವರಿತವಾಗಿ ಕಾಯನಿರ್ವಹಿಸಿ ನಮ್ಮನ್ನು ಹಿಡಿದಿರುವ ಕತ್ತಲನ್ನು ಶುದ್ಧಿಕರಿಸಿ, ಗಾಯ ಕಟ್ಟಿ ನಾವು ಗುಣಹೊಂದುವಂತೆ ದೇವರ ಕರಗಳ ಕಡೆಗೆ ತಿರುಗಬೇಕು. ಸಭೆಯೆಂಬುದು ಇಂತಹ ಕಾರ್ಯಗಳಲ್ಲಿ ಇನ್ನೂ ಕೂಡ ಉದಾಸೀನವಾಗಿದರೆ ಕಾಲ ಇನ್ನು ಸಾಗದು ಎಂಬುದನ್ನು ಅರಿತು ತ್ವರಿತವಾಗಿ ಕಾರ್ಯನಿರ್ವಹಿಸಲು ಪ್ರಜ್ಞೆಹೊಂದುವಂತೆ ಪ್ರಾರ್ಥಿಸಿರಿ.

08. ದೇವರ ಮಕ್ಕಳಿಗೂ, ಸಭೆಗಳಿಗೂ ಕೇಡು ಮಾಡುವಂತೆ ಎದ್ದಿರುವಂತ ಎಲ್ಲಾ ದುಷ್ಟಜನರು ಮತ್ತು ಇವರುಗಳನ್ನು ಅವಲಂಭಿಸಿರುವ ಸಂಘಟನೆಗಳು ಮಾನಸಾಂತರ ಹೊಂದುವಂತೆಯೂ, ಕಂಕಣ ಕಟ್ಟಿಕೊಂಡು ದೇವರ ಸಭೆಗಳನ್ನು ನಾಶಗೊಳಿಸಲು ಹೊರಡುವ ಸೌಲ ನಂತವರು ಸಂಧಿಸಲ್ಪಟ್ಟು ಪೌಲನಂತೆ ಮಾರ್ಪಡುವಂತೆಯೂ ಪ್ರಾರ್ಥಿಸಿರಿ.

## ಪ್ರವಾಧನೆಗಳಿಗಾಗಿ ನಿರಂತರವಾಗಿ ಪ್ರಾರ್ಥಿಸಲು ಇಚ್ಚಿಸುತ್ತಿರಾ ?

ದೇವರು ಪ್ರಕಟಿಸಿ ತಿಳಿಸಿದಂತ ಇಂತಹ ಪ್ರವಾಧನೆಗಳಿಗಾಗಿ ನೀವು ನಿರಂತರವಾಗಿ ಪ್ರಾರ್ಥಿಸಲು ಇಚ್ಚಿಸುತ್ತಿರಾ? ಹಾಗಾದರೆ ಕೆಳಗೆ ಕೊಡಲ್ಪಟ್ಟಿರುವ ನಮ್ಮ ದೂರವಾಣಿ ಸಂಖ್ಯೆಗಳಲ್ಲಿ ನಿಮಗೆ ಸಮೀಪವಾದ ಯಾವುದಾದರು ಸಂಖ್ಯೆಗೆ ಮಿಸ್ಡ್ ಕಾಲ್ ಕೊಡಿರಿ. ತಕ್ಷಣವೆ ನಮ್ಮ ಸೇವಕರು ನಿಮ್ಮೊಂದಿಗೆ ಸಂಪರ್ಕಗೊಂಡು ನಿರಂತರವಾಗಿ ನೀವು ಪ್ರಾರ್ಥಿಸಬೇಕಾದ ದೇವರು ಪ್ರಕಟಿಸಿದ ಪ್ರವಾದನ ನುಡಿಗಳನ್ನು ನಮ್ಮ ಬಳಿಯಿಂದ ಹೊಂದಿಕೊಳ್ಳಲು ನಿಮಗೆ ಸಹಾಯ ಮಾಡುವರು. ಇದರ ಮೂಲಕ ನೀವು ದೇವರು ಮಾತನಾಡಿ ತಿಳಿಸುವಂತ ಪ್ರವಾದನೆಯ ಪ್ರಕಟನೆಗಳನ್ನು ತಕ್ಷಣವೇ ಹೊಂದಿಕೊಂಡು ಪ್ರಾರ್ಥಿಸಲು ಸಹಾಯವಾಗಿರುತ್ತದೆ.


RAMANATHAPURAM 9788404222
MADURAI 9600001844
CHENNAI 9488987770
BENGALURU 8095772333
Email: propagators@vojmedia.com


ಪ್ರವಾದನಾ ಕರ ಪತ್ರಗಳು ಕನ್ನಡ, ಆಂಗ್ಲ, ತಮಿಳು, ಮಲೆಯಾಳಂ, ಸಿಂಗಳಂ, ತೆಲುಗು, ಹಿಂದಿ, ಒರಿಯಾ ಬಾಷೆಗಳಲ್ಲಿ ಪ್ರಕಟಗೊಂಡು ವಿತರಿಸಲ್ಪಡುತ್ತಿದೆ. ನೀವು ಪ್ರರ್ಥಿಸುವದಕ್ಕೆ ಮಾತ್ರವಲ್ಲ, ಇತರರಿಗೆ ವಿತರಿಸುವದಕ್ಕೂ ಇದನ್ನು ಉಪಯೋಗಿಸಿಕೊಳ್ಳಬಹುದು.


PROPHETIC PROPAGATORS MISSION
ASSOCIATED WITH VOICE OF JESUS, RAMANATHAPURAM